# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 49/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಬಸವರಾಜು | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಲೇ.ಚಿಕ್ಕಣ್ಣ | | **18.03.2024** |
| ವಯಸ್ಸು | ಃ 47 ವರ್ಷ | | |
| ವೃತ್ತಿ | ಃ ಮಟನ್ ಅಂಗಡಿ ವ್ಯಾಪಾರ | ಪ್ರಾ.ಸಾ. | ಃ 01 |
| ವಾಸಸ್ಥಳ | ಃ ಹೂಟಗಳ್ಳಿ, ಮೈಸೂರು | ಚಾ.ಸಾ. | ಃ 02 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈಗ ಅಂದಾಜು *10* ವರ್ಷಗಳ ಹಿಂದೆ ಒಂದು ದಿನ ನಾನು ಬೇರೆ ಯಾವುದೋ ಕೆಲಸಕ್ಕೆ ವಿಜಯನಗರ ಪೋ.ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನ ಸಹಿ ಪಡೆದಿದ್ದರು. ಆ ಕಾಲಕ್ಕೆ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ. ಈಗ ನಾನು ನೋಡುತ್ತಿರುವ ಮಹಜರ್ ಮೇಲಿನ ಸಹಿ ನನ್ನದೇಇದೆ. ಸದರಿ ಮಹಜರ್ ಅನ್ನು ನಿ.ಪಿ–*1* ಮತ್ತು ಸಹಿಯನ್ನು ನಿ.ಪಿ–*1*(ಎ) ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*24.03.2014* ರಂದು ನನ್ನ ಸಮಕ್ಷಮ ಹೂಟಗಳ್ಳಿ ಕೈಗಾರಿಕ ಪ್ರದೇಶದ ರಾಣೆ ಮದ್ರಾಸ್ ರಸ್ತೆಯಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಈ ಪ್ರಕರಣದ

ಪಿರ್ಯಾದಿದಾರರಾದ ಕೇಶವ್ ಗೌಡ ಇವರು ಹಾಜರಿದ್ದು ದಿಃ*08.03.2014* ರಂದು ಅವರು ಎರಡನೇ ಪಾಳಿ ಕೆಲಸ ಮುಗಿಸಿ ರಾತ್ರಿ *11.20* ಕ್ಕೆ ಫ್ಯಾಕ್ಟರಿಯಿಂದ ಮನೆಗೆ ಹೊಗುವ ಸಲುವಾಗಿ ಆರ್.ಪಿ.ಜಿ ಫ್ಯಾಕ್ಟರಿ ರಸ್ತೆಯಲ್ಲಿ ಹೋಗುತ್ತಿರುವಾಗ ಬೈಕ್ ನಲ್ಲಿ ಬಂದ ಮೂರು ಜನ ತನ್ನನ್ನು ನಿಲ್ಲಿಸಿ ಚಾಕುವಿನಿಂದ ಹೊಡೆದಾಗ ತಾನು ತಪ್ಪಿಸಿಕೊಂಡು ಹೋಗಿದ್ದಾಗಿ ಆ ಸ್ಥಳವನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ನಿ.ಪಿ-*1* ರಂತೆ ಮಹಜರ್ ಬರೆದು ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು